ಮಧ್ವರಾಯರ ನೆನೆದು ಶುದ್ಧರಾಗಿರೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 34.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 434.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 85.
4. **Note:** Lyrics mentioned without highlights are as per Ref. 1. The wordings in Ref. 2 are similar to Ref. 1 except few differences which are given in yellow highlights. Other minor differences are not considered here. The wordings in Ref. 3 are same as in Ref. 2.
5. **Note:** Singer has followed wordings as in Ref. 2. The wordings in Ref. 3 are same as in Ref. 2.
6. **Note:** Ankita is different in both the books. We have considered book in Ref.1 as standard and taken that Ankita for listing.

ರಾಗ: ಭೂಪಾಳಿ ತಾಳ: ಆದಿ

ಮಧ್ವರಾಯರ ನೆನೆದು (ಪರಿ) ಶುದ್ಧರಾಗಿರೋ ‖ ಪ ‖
ಹೊದ್ದಿ ವೈಷ್ಣವ ಮತ ಭವಾಬ್ಧಿ ದಾಟಿರೋ ‖ ಅಪ ‖

ಉದಯದಲ್ಲಿ ಏಳುವಾಗ (ಮುದದಿ) (ನದಿಯ) ಸ್ನಾನ ಮಾಡುವಾಗ
ಒದಗಿ ನಿತ್ಯ ಕರ್ಮಗಳನು ನಡೆಸುವಾಗ
ಹೃದಯದಲ್ಲಿ ಬೀಜಾಕ್ಷರ ಮಂತ್ರಗಳನು ಜಪಿಸುವಾಗ
ಸದಮಲಾನಂದ ಹನುಮನನ್ನು ನೆನೆಯಿರೋ ‖ 1 ‖

ಕಾಮವಿಲ್ಲದ ಹರಿಯ ಪೂಜೆ ವೈಶ್ವದೇವ ಮಾಡುವಾಗ
ಪ್ರೇಮದಿಂದ (ವೈಷ್ಣವೊತ್ತಮರು) (ವೈಷ್ಣವರ) ಅರ್ಚಿಸುವಾಗ
ಆ ಮಹಾ ಭಕ್ಷ್ಯ ಭೋಜ್ಯ ಆರೋಗಣೆ ಮಾಡುವಾಗ
ನೇಮದಿಂದ ಕೌರವಾಂತಕ ಭೀಮಸೇನನ ನೆನೆಯಿರೋ ‖ 2 ‖

ಕರಗಳನ್ನು ತೊಳೆದು ತೀರ್ಥ ತುಳಸೀ (ದಳವ ಮೆಲ್ಲುವಾಗ) (ದಳ ವೀಯುವಾಗ)
ಪರಿಪರಿಯ ಪುಷ್ಪ ವೀಳ್ಯ ಅರ್ಪಿಸುವಾಗ
ಸರುವಾಂತರ್ಯಾಮಿ ಗುರು ಮಧ್ವರಂತರಾತ್ಮಕ
ಪುರಂದರ ವಿಠಲಗೆ ಸಮರ್ಪಣೆ ಮಾಡಿರೋ || 3 ||
(ಸರುವಾಂತರ್ಯಾಮಿ ನಮ್ಮ ಪರಮ ಗುರು ಮಧ್ವಾಂತರಾತ್ಮಕ
ಸಿರಿ ಪುರಂದರ ವಿಠಲಗೆ ಸರ್ವ ಸಮರ್ಪಣೆ ಮಾಡಿರೋ)

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಈ ಹಾಡಿನಲ್ಲಿ ವಾಯುದೇವರ ಮೂರೂ ಅವತಾರಗಳ ಮಹಾತ್ಮ್ಯ ವರ್ಣನೆ ಇದೆ.

ಹೊದ್ದಿ = ಹೊಂದಿ

ಭಾವಾಬ್ಧಿ = ಸಂಸಾರ ಸಾಗರ

ಬೀಜಾಕ್ಷರ = ಸಾಮಾನ್ಯವಾಗಿ ಜಪ ಮಂತ್ರದ ಮೊದಲನೆಯ ಅಕ್ಷರ. ಉ.ದಾ. : - ವಾಸುದೇವಾಯ ನಮಃ ಮಂತ್ರದ ಮೊದಲಿನ ಅಕ್ಷರವಾದ 'ವಾ' - ಇದು ಬೀಜಾಕ್ಷರ

ಸದಮಲಾನಂದ = ನಿರತಿಶಯಾನಂದ

ಕಾಮವಿಲ್ಲದ = ಫಲಾಪೇಕ್ಷೆ ಇಲ್ಲದೆ (ನಿಷ್ಕಾಮ)

ವೈಶ್ವದೇವ = ವೇದಾಧಿಕಾರವುಳ್ಳ ಗೃಹಸ್ಥರು ಮಾಡುವ ಪಂಚ ಮಹಾ ಯಜ್ಞಗಳಲ್ಲಿ ಒಂದು

ವೈಷ್ಣವ = ವಿಷ್ಣು ಭಕ್ತ

ಆರೋಗಣೆ = ಊಟ

ತೀರ್ಥ ತುಳಸಿ ದಳವ ಮೆಲ್ಲುವಾಗ : - ಊಟವಾದಮೇಲೆ ಕೈ ಕಾಲು ತೊಳೆದು ತೀರ್ಥ ತೆಗೆದುಕೊಂಡು ತುಳಸಿ ದಳವನ್ನು ತಿನ್ನಬೇಕೆಂಬುದು ವೈಷ್ಣವರ ಸಂಪ್ರದಾಯ.

Classification: Keerthane
Ankita: purandara vittala
Location: NA

Category: Hanuma Stuti, Madhwacharya Stuti, Pooja Tatva.
Sub-Category: hanuma, hanuma-bhima-madhva, bhima, madhva, madhwacharya, hrudaya, karma, nadi, snana, japa, Krishna, puje, archane, oota, kaurava, kai, tirtha, tulasi, pushpa, phala, bhava,
Pravachana: NA
Explanation: NA